# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1147 |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಮಟ್ಟದ ಸ್ಮಾರ್ಟ್ ಟೌನ್ಸ್ ಮಿಷನ್ ಅಡಿಯಲ್ಲಿ ಕರ್ನಾಟಕದಾದ್ಯಂತ ಸುಮಾರು 200 ಪಟ್ಟಣಗಳನ್ನು ಯೋಜಿತ ನಗರಾಭಿವೃದ್ಧಿಗಾಗಿ ಸರ್ಕಾರ ಗುರುತಿಸಿದೆಯೇ: | ಸ್ಮಾರ್ಟ್ ಟೌನ್ಸ್ ಪ್ರಸ್ತಾವನೆ ಇರುವುದಿಲ್ಲ . |
| ಆ) | ಈ ಉದಯೋನ್ಮುಖ ನಗರ ಕೇಂದ್ರಗಳಲ್ಲಿ ಕಾರ್ಮಿಕ-ತೀವ್ರ ಕೈಗಾರಿಕೆಗಳು, ಸುಸ್ಥಿರ ಮೂಲಸೌಕರ್ಯ ಮತ್ತು ಸಾರ್ವಜನಿಕ ಸೇವೆಗಳನ್ನು ಸಂಯೋಜಿಸಲು ರಚನಾತ್ಮಕ ಯೋಜನೆ ಇದೆಯೇ; | |
| ಇ) | ಕರ್ನಾಟಕದಲ್ಲಿ ಸ್ಮಾರ್ಟ್ ಸಿಟಿ ಕಾರ್ಯಕ್ರಮವು ಘನತ್ಯಾಜ್ಯ ನಿರ್ವಹಣೆ, ಶುದ್ಧ ಇಂಧನ, ಇ.ವಿ ಸಾರಿಗೆ ಮತ್ತು ಡಿಜಿಟಲ್ ಆಡಳಿತಕ್ಕಾಗಿ ಭವಿಷ್ಯದ ಯೋಜನೆಯನ್ನು ಒಳಗೊಂಡಿದೆಯೇ; | ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಯ ಅನುಸಾರ ಆಯ್ಕೆಯಾದ ನಗರಗಳಲ್ಲಿ ಈ ಕೆಳಗೆ ಗುರುತಿಸಲಾದ ಪ್ರಮುಖ ಮೂಲಭೂತಸೌಕರ್ಯ (Core Infrastructure Elements) ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ<br>• ಒಳಚರಂಡಿ ಕಾಮಗಾರಿಗಳು<br>• ಉದ್ಯಾನವನಗಳ ಅಭಿವೃದ್ಧಿ<br>• ಕೆರೆ ಹಾಗೂ ನದಿ ಪ್ರದೇಶಗಳ ಅಭಿವೃದ್ಧಿ<br>• Integrated Command and Control Centre ಮತ್ತು ICT ಆಧಾರಿತಸೇವೆಗಳು<br>• ಇವಿ ಆಟೋರಿಕ್ಷಾ<br>• ಮಾರುಕಟ್ಟೆಗಳ ಪುನರ್ ನವೀಕರಣ<br>• ಪಾರ್ಕಿಂಗ್ ಪ್ರದೇಶಗಳ ಅಭಿವೃದ್ಧಿ<br>• ಕ್ರೀಡಾಂಗಣ / ಈಜುಕೊಳಗಳ ಅಭಿವೃದ್ಧಿ<br>• ಪಿಪಿಪಿ ಮಾದರಿಯಲ್ಲಿ ಸೌರಶಕ್ತಿ ಯೋಜನೆ<br>• Public Bicycle Sharing ಯೋಜನೆ , LED, ಬೀದಿ ದೀಪಗಳ ಅಳವಡಿಕೆ |
| ಈ) | ಬೆಂಗಳೂರು ಹೊರಗಡೆ ಏಕರೂಪದ ನಗರಾಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ರಾಜಧಾನಿ ನಗರದ ಮೇಲೆ ವಲಸೆ ಒತ್ತಡವನ್ನು ಕಡಿಮೆ ಮಾಡಲು ಯಾವ ಪ್ರಯತ್ನಗಳನ್ನು ಮಾಡಲಾಗುತ್ತಿದೆ; | ಬಿ.ಎಂ.ಆರ್.ಡಿ.ಎ ವ್ಯಾಪ್ತಿಯಲ್ಲಿ ಬೆಂಗಳೂರು ಹೊರಗಡೆ ಏಕರೂಪ ಬೆಳವಣಿಗೆಗಾಗೆ ಏಕರೂಪ ವಲಯ ನಿಯಮಾವಳಿಗಳನ್ನು ರೂಪಿಸುವ ಪ್ರಸ್ತಾವನೆ ಪರಿಶೀಲಿನಾ ಹಂತದಲ್ಲಿರುತ್ತದೆ.<br><br>ಮಾಗಡಿ, ಹೊಸಕೋಟೆ ಮತ್ತು ಕನಕಪುರ ತಾಲ್ಲೂಕುಗಳಲ್ಲಿ ಸೋಲೂರು, ನಂದಗುಡಿ ಮತ್ತು ಸಾತನೂರು ಉಪನಗರಗಳನ್ನು ಅಭಿವೃದ್ಧಿಪಡಿಸಲು ಕ್ರಮಜರುಗಿಸಲಾಗುತ್ತಿದೆ. |

| | | |
|---|---|---|
| | | ಉಪನಗರ ವರ್ತುಲ ರಸ್ತೆ, ಐ.ವಿ.ಸಿ ಹಾಗೂ ಸುತ್ತಮುತ್ತಲಿನ ಇತರ ಪ್ರದೇಶಗಳಲ್ಲಿ ಸೂಕ್ತ ಟೌನ್‌ಶಿಪ್‌ಗಳನ್ನು ಗುರುತಿಸಲಾಗಿದೆ ಹಾಗೂ ಸರ್ಕಾರದ ಯೋಜನೆಯಾದ ಕ್ವಿನ್‌ಸಿಟಿಗೆ ಸಮೀಪದಲ್ಲಿ ಅಂದಾಜು 1377ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಉಪನಗರವನ್ನು ಪ್ರಸ್ತಾಪಿಸಲು ಸ್ಥಳ ಗುರುತಿಸಲಾಗಿದೆ ಹಾಗೂ ಕಾರ್ಯಸಾಧ್ಯತಾ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ರಾಮನಗರ ತಾಲ್ಲೂಕು, ಕಸಬಾ ಹೋಬಳಿಯ ಅರ್ಚಕರಹಳ್ಳಿ ವ್ಯಾಪ್ತಿಯಲ್ಲಿ 115ಎಕರೆ - 35ಗುಂ ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)ರ ಅಡಿಯಲ್ಲಿ ದಿನಾಂಕ:20.11.2025ರಂದು ಸರ್ಕಾರದಿಂದ ಪೂರ್ವಾನುಮತಿ ನೀಡಲಾಗಿದೆ.<br><br>ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿಯ ಭಾಗಶಃ ಗ್ರಾಮಗಳಾದ ಅರಳಾಳು, ಬೇಕುಪ್ಪೆ, ಚೌಕಸಂದ್ರ, ಹೊರಳಗಲ್ಲು, ಕೂನೂರು, ಶೀಗೇಕೋಟೆ, ಶಿವನಹಳ್ಳಿ, ತಿಗಳರ ಹೊಸಹಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 1182.92 ಹೆಕ್ಟೇರ್ ಪ್ರದೇಶದಲ್ಲಿ ಕೈಗಾರಿಕಾ ಉಪನಗರ ಯೋಜನೆಯನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅನುಷ್ಠಾನಗೊಳಿಸಲು ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಹಿಂಪಡೆದು ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರ್ಪಡೆಗೊಳಿಸಲು ದಿನಾಂಕ:24.11.2025ರಂದು ಆದೇಶ ಹೊರಡಿಸಲಾಗಿದೆ. |
| ಉ) | ಜನಸಂಖ್ಯೆಯ ಒಳಹರಿವು ಮತ್ತು ಮೂಲಸೌಕರ್ಯ ಅಗತ್ಯಗಳನ್ನು ನಿರ್ವಹಿಸಲು ಎಲ್ಲಾ ಶ್ರೇಣಿ-2 ಪಟ್ಟಣಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಸ್ಥಾಪಿಸಲು ಸರ್ಕಾರ ಪ್ರಸ್ತಾಪಿಸುತ್ತದೆಯೇ? | ಒಂದು ಲಕ್ಷ ಜನ ಸಂಖ್ಯೆ ಮೀರಿದ ಸ್ಥಳೀಯ/ನಗರ ಯೋಜನಾ ಪ್ರಾಧಿಕಾರವನ್ನು ನಗರಾಭಿವೃದ್ಧಿ ಪ್ರಾಧಿಕಾರಿಗಳನ್ನಾಗಿ ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ 1987ರ ಕಲಂ 3ರ ಉಪ ಕಲಂ(1)ರಡಿಯಲ್ಲಿ ಕ್ರಮವಹಿಸಲಾಗುವುದು. |

ಸಂಖ್ಯೆ: ನಅಇ 22 ಸಿಎಸ್‌ಎಸ್ 2026

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು